# ವಾಟ್ಸ್ಆ್ಯಪ್: ಮೆಸೇಜ್ ಯುವರ್‌ಸೆಲ್ಫ್

**ವಾಟ್ಸ್ಆ್ಯಪ್ ಈಚೆಗೆ ಹಲವು ಫೀಚರ್‌ಗಳನ್ನು ತನ್ನ ಗ್ರಾಹಕರಿಗೆ ಪರಿಚಯಿಸಿದೆ. ಮುಂದಿನ ದಿನಗಳಲ್ಲಿ ಇನ್ನೂ ಕೆಲವು ಫೀಚರ್‌ಗಳನ್ನು ಪರಿಚಯಿಸಲಿದೆ. ಈ ಫೀಚರ್‌ಗಳ ಪೈಕಿ ನಮಗೆ ನಾವೇ ಮೆಸೇಜ್ ಮಾಡುವುದೂ ಸೇರಿದೆ.**

■ **ಶಶಿಕುಮಾರ್ ಸಿ.**

ಬಹುತೇಕ ಗಂಡಂದಿರಿಗೆ ತಮ್ಮ ಪತ್ನಿಯರ ವಾಟ್ಸ್ಆ್ಯಪ್ ಸಂಖ್ಯೆಯು ಒಂದು ರೀತಿಯ ಡಸ್ಟ್‌ಬಿನ್ ಇದ್ದಂತೆ. ಮೆಸೇಜ್, ಫೋಟೊ, ವಿಡಿಯೊ ಹಾಗೂ ಡಾಕ್ಯುಮೆಂಟ್ ಸೇರಿದಂತೆ ಡಿಜಿಟಲ್ ಫೈಲ್‌ನ ಎಲ್ಲವನ್ನೂ ತಮ್ಮ ಪತ್ನಿಯ ವಾಟ್ಸ್ಆ್ಯಪ್ ಸಂಖ್ಯೆಗೆ ತುಂಬುವುದನ್ನು ವಾಡಿಕೆಯಾಗಿಸಿಕೊಂಡವರಿದ್ದಾರೆ. ಇನ್ನೂ ಕೆಲವರು ತಮ್ಮ ಆತ್ಮೀಯರೊಬ್ಬರ, ಇನ್ನಿತರ ನಿರ್ದಿಷ್ಟ ವ್ಯಕ್ತಿಯ ಅಥವಾ ಗ್ರೂಪ್ ಒಂದಕ್ಕೆ ಕಳುಹಿಸುತ್ತಾರೆ. ಯಾರಿಗೇ ಆದರೂ ಈ ಮನಸ್ಥಿತಿಯು ಸಹಜವಾಗಿ ಕಿರಿಕಿರಿ ಉಂಟು ಮಾಡುತ್ತದೆ.

ಹೆಂಡತಿಯ ವಾಟ್ಸ್ಆ್ಯಪ್ ಸಂಖ್ಯೆಯನ್ನು ಡಸ್ಟ್‌ಬಿನ್‌ನಂತೆ ಭಾವಿಸಿರುವ ಗಂಡಂದಿರಿಗೆ ಮತ್ತು ಸ್ಟೋರೇಜ್ ದೃಷ್ಟಿಯಿಂದ ಬೇರೆಯವರಿಗೆ ಕಳುಹಿಸುವವರಿಗೆ ಹೇಳಿ ಮಾಡಿಸಿದಂತಿದೆ ಮೆಟಾ ಒಡೆತನದ ವಾಟ್ಸ್ಆ್ಯಪ್ ಕಂಪನಿಯ 'ಮೆಸೇಜ್ ಯುವರ್‌ಸೆಲ್ಫ್' ಫೀಚರ್!

'ವಾಟ್ಸ್ಆ್ಯಪ್' ಚಾಲ್ತಿಗೆ ಬಂದ ನಂತರ ಮೆಸೇಜ್, ಫೋಟೊ, ವಿಡಿಯೊ ಹಾಗೂ ಡಾಕ್ಯುಮೆಂಟ್ ಕಳುಹಿಸಲು ಹೆಚ್ಚಾಗಿ ಬಳಕೆಯಲ್ಲಿರುವ ಈ ಆ್ಯಪ್ ಬಳಕೆದಾರರಿಗೆ ಸ್ಟೋರೇಜ್ ಸ್ಪೇಸ್ ಸಹ ಆಗಿದೆ. ಅಂಥವರು ಬೇರೆಯವರಿಗೆ ಡಿಜಿಟಲ್ ಫೈಲ್ ಕಳುಹಿಸಿ ಕಿರಿಕಿರಿ ಉಂಟುಮಾಡುವುದರ ಬದಲು ತಮಗೆ ತಾವೇ ಕಳುಹಿಸಿಕೊಳ್ಳಬಹುದು.

### ಕಳುಹಿಸುವುದು ಹೇಗೆ?

ಮೊದಲು ವಾಟ್ಸ್ಆ್ಯಪ್ ಅನ್ನು ಇತ್ತೀಚಿನ ಆವೃತ್ತಿಗೆ ಅಪ್‌ಡೇಟ್ ಮಾಡಿಕೊಳ್ಳಬೇಕು. ನಂತರ ಆ್ಯಪ್ ತೆರೆದು 'ನ್ಯೂ ಚಾಟ್ಸ್' ಸಿಂಬಲ್ ಅಥವಾ ಆಯ್ಕೆಯ ಮೇಲೆ ಕ್ಲಿಕ್ಕಿಸಬೇಕು. ಬಳಿಕ ತೆರೆದುಕೊಳ್ಳುವ ಕಾಂಟ್ಯಾಕ್ಟ್ ಪಟ್ಟಿಯ ಮೇಲ್ಭಾಗದಲ್ಲಿ 'ಯು' ಎಂಬ ಆಯ್ಕೆಯು ಕಾಣಿಸಿಕೊಳ್ಳಲಿದೆ. ಅದನ್ನು ಕ್ಲಿಕ್ಕಿಸಿದೊಡನೆ ನಿಮ್ಮ ವಾಟ್ಸ್ಆ್ಯಪ್ ನಂಬರ್‌ನ ಪ್ರೊಫೈಲ್ ತೆರೆದುಕೊಳ್ಳುತ್ತದೆ. ಅದಕ್ಕೆ ಮೆಸೇಜ್, ಫೋಟೊ, ವಿಡಿಯೊ ಹಾಗೂ ಡಾಕ್ಯುಮೆಂಟ್ ಸೇರಿದಂತೆ ಡಿಜಿಟಲ್ ಫೈಲ್‌ನ ಎಲ್ಲವನ್ನೂ ಕಳುಹಿಸಿಕೊಳ್ಳಬಹುದು.

### ಡೆಸ್ಕ್‌ಟಾಪ್‌ಗೂ ಸ್ಕ್ರೀನ್‌ಲಾಕ್

ಮೊಬೈಲ್ ಬಳಕೆದಾರರಿಗೆ ಕಲ್ಪಿಸುವಂತೆಯೇ ಡೆಸ್ಕ್‌ಟಾಪ್ ಮತ್ತು ಲ್ಯಾಪ್‌ಟಾಪ್‌ನಲ್ಲಿ ವಾಟ್ಸ್ಆ್ಯಪ್ ಬಳಸುವವರಿಗೆ ಹಲವು ಫೀಚರ್‌ಗಳನ್ನು ಒದಗಿಸಲು ಮೆಟಾ ಮುಂದಾಗಿದೆ. ಮೊಬೈಲ್ ಆವೃತ್ತಿಯಲ್ಲಿ ಲಭ್ಯವಿರುವ ಸ್ಕ್ರೀನ್‌ಲಾಕ್ ಫೀಚರ್ ಅನ್ನು ವಾಟ್ಸ್ಆ್ಯಪ್ ವೆಬ್ ಆವೃತ್ತಿಯಲ್ಲೂ ಪರಿಚಯಿಸುವುದಾಗಿ ಕಂಪನಿ ಹೇಳಿದೆ. ಇದರಿಂದ ಖಾಸಗಿತನ ಮತ್ತು ಭದ್ರತೆಗೂ ಹೆಚ್ಚಿನ ಆದ್ಯತೆ ಸಿಗಲಿದೆ.

### ಲಿಂಕ್ ವಿಥ್ ಯುವರ್ ಫೋನ್

ಆ್ಯಂಡ್ರಾಯ್ಡ್ ಬೀಟಾ ಆವೃತ್ತಿಯನ್ನು ಬಳಸುತ್ತಿರುವ ಬಳಕೆದಾರರಿಗೆ 'ಲಿಂಕ್ ವಿಥ್ ಯುವರ್ ಫೋನ್' ಫೀಚರ್ ಅನ್ನು ಪರಿಚಯಿಸುವ ಉದ್ದೇಶವನ್ನು ವಾಟ್ಸ್ಆ್ಯಪ್ ಹೊರಹಾಕಿದೆ. ಇದರ ಮೂಲಕ ವಾಟ್ಸ್ಆ್ಯಪ್‌ನ ಒಂದೇ ಖಾತೆಯನ್ನು ನಾಲ್ಕು ಸ್ಮಾರ್ಟ್‌ಫೋನ್‌ನೊಂದಿಗೆ ಲಿಂಕ್ ಮಾಡಿ ಬಳಸಲು ಅವಕಾಶ ಕಲ್ಪಿಸುವ ಉದ್ದೇಶ ಕಂಪನಿಯದ್ದು. ಒಂದು ವೇಳೆ ಇದು ಯಶಸ್ವಿಯಾದಲ್ಲಿ ಒಂದೇ ಖಾತೆಯನ್ನು ನಾಲ್ಕು ಸ್ಮಾರ್ಟ್‌ಫೋನ್‌ಗಳಲ್ಲಿ ಬಳಸಬಹುದಾಗಿದೆ.

### ಪರಿಣಾಮಕಾರಿ ಆಗುವುದೇ 'ಪೋಲ್'

ಆ್ಯಂಡ್ರಾಯ್ಡ್ ಮತ್ತು ಐಫೋನ್ ಬಳಕೆದಾರರಿಗೆ 'ಪೋಲ್' (Poll) ಆಯ್ಕೆಯನ್ನು ಪರಿಚಯಿಸಿದೆ. ಗ್ರೂಪ್ ಹಾಗೂ ವೈಯಕ್ತಿಕ ಚಾಟ್‌ಗಳಲ್ಲಿ ಪೋಲ್ ಆಯ್ಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಬಹುದು. ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದು, ಪೋಲ್ ಆಯ್ಕೆಯು ಸದ್ಯ ಬಳಕೆದಾರರನ್ನು ಆಕರ್ಷಿಸುತ್ತಿದೆ.

ಐಫೋನ್‌ನಲ್ಲಾದರೆ, ಗ್ರೂಪ್ ಅಥವಾ ವೈಯಕ್ತಿಕ ಚಾಟ್‌ಗೆ ತೆರಳಿ ಚಾಟ್‌ಬಾಕ್ಸ್‌ನಲ್ಲಿರುವ ಪ್ಲಸ್ ಆಯ್ಕೆಯನ್ನು ಕ್ಲಿಕ್ಕಿಸಿ. ಅಲ್ಲಿ ಕಾಣಲಿರುವ ಪೋಲ್ ಆಯ್ಕೆಯನ್ನು ಕ್ಲಿಕ್ಕಿಸುವುದರ ಮೂಲಕ ಪೋಲ್ ರಚಿಸಬಹುದು. ಅಥವಾ ಭಾಗಿಯಾಗಬಹುದು. ಆ್ಯಂಡ್ರಾಯ್ಡ್ ಬಳಕೆದಾರರು ವಾಟ್ಸ್ಆ್ಯಪ್‌ನ ಚಾಟ್‌ಬಾಟ್‌ನಲ್ಲಿರುವ ಅಟ್ಯಾಚ್‌ಮೆಂಟ್ ಆಯ್ಕೆಯನ್ನು ಕ್ಲಿಕ್ಕಿಸಿ, ಪೋಲ್ ಆಯ್ಕೆಗೆ ತಲುಪಬಹುದು. ಬಳಿಕ ಬೇಕಾದಂತೆ ಪೋಲ್ ರಚಿಸಿ, ಬಳಸಬಹುದು.

### ವಿಡಿಯೊ ಕರೆ ಮಿತಿ ಹೆಚ್ಚಳ

ವಾಟ್ಸ್ಆ್ಯಪ್ ಮೂಲಕ ಧ್ವನಿ ಮತ್ತು ವಿಡಿಯೊ ಕರೆ ಮಾಡುವಾಗ ಏಕಕಾಲದಲ್ಲಿ 32 ಜನರ ಜೊತೆ ಸಂಪರ್ಕ ಸಾಧಿಸುವ ಅವಕಾಶವನ್ನು ವಾಟ್ಸ್ಆ್ಯಪ್ ಕಲ್ಪಿಸಿದೆ. ಹಿಂದೆ ಇದರ ಮಿತಿ ಕಡಿಮೆ ಇತ್ತು. ಇದರಿಂದ ವರ್ಚುವಲ್ ಮೀಟಿಂಗ್‌ನಂತಹ ಸಂದರ್ಭದಲ್ಲಿ ತೊಂದರೆಯಾಗುತ್ತಿತ್ತು. ಈಗ ಈ ಸಮಸ್ಯೆ ಕೊಂಚ ನಿವಾರಣೆಯಾಗಿದೆ.

ಜೊತೆಗೆ ಒಂದೇ ಬಾರಿಗೆ ಗರಿಷ್ಠ 2 ಜಿ.ಬಿ.ವರೆಗಿನ ಕಡತಗಳನ್ನು ಕಳುಹಿಸುವುದಕ್ಕೂ ವಾಟ್ಸ್ಆ್ಯಪ್ ಅನುವು ಮಾಡಿಕೊಡಲಿದೆ. ಇದರಿಂದ ದೊಡ್ಡ ಗಾತ್ರದ ಫೈಲ್‌ಗಳನ್ನು ಸುಲಭವಾಗಿ ವಾಟ್ಸ್ಆ್ಯಪ್‌ನಲ್ಲೇ ಕಳುಹಿಸಬಹುದು. ವಾಟ್ಸ್ಆ್ಯಪ್ ಗುಂಪಿನಲ್ಲಿ ಗರಿಷ್ಠ 1,024 ಜನರನ್ನು ಸೇರಿಸಿಕೊಳ್ಳುವ ಅವಕಾಶ, ಗರಿಷ್ಠ ಐದು ಸಾವಿರ ಜನರಿಗೆ ಸಂದೇಶಗಳನ್ನು ಬ್ರಾಡ್‌ಕಾಸ್ಟ್ ಮಾಡುವ ಅವಕಾಶವನ್ನು ಕಂಪನಿ ಕಲ್ಪಿಸಲಿದೆ. ■

> ವಾಟ್ಸ್ಆ್ಯಪ್‌ನಲ್ಲಿ ನಾವು ಇಂದು 'ಕಮ್ಯುನಿಟೀಸ್'ಗೆ ಚಾಲನೆ ನೀಡಿದ್ದೇವೆ. ಇದರ ಮೂಲಕ ಗ್ರೂಪ್‌ಗಳು ಇನ್ನಷ್ಟು ಉತ್ತಮವಾಗುತ್ತವೆ. ಪೋಲ್ ಹಾಗೂ ಒಂದೇ ಬಾರಿಗೆ 32 ಜನರಿಗೆ ವಿಡಿಯೊ ಕರೆ ಮಾಡುವ ಸೌಲಭ್ಯವನ್ನು ಕೂಡ ನಾವು ಆರಂಭಿಸಿದ್ದೇವೆ.
>
> -ಮಾರ್ಕ್ ಜುಕರ್‌ಬರ್ಗ್,
> ಮೆಟಾ ಕಂಪನಿ ಸಂಸ್ಥಾಪಕ

